ಚುಟುಕು ಸುದ್ದಿ

ವಿಜಯಪುರದಲ್ಲಿ ನಡೆದ ವಿವಿಧ ಸ್ಪರ್ಧೆಗಳಲ್ಲಿ ವಿಜೇತ ವಿದ್ಯಾರ್ಥಿಗಳಿಗೆ ಪಾರಿತೋಷಕ ವಿತರಿಸಲಾಯಿತು.

ಸ್ಪರ್ಧೆಗಳಿಂದ ಮನುಷ್ಯನ ಆತ್ಮವಿಶ್ವಾಸ ಹೆಚ್ಚಳ

ವಿಜಯಪುರ: ಸ್ಪರ್ಧೆಗಳು ಮನುಷ್ಯನಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತವೆ. ಕೇವಲ ಅಧ್ಯಯನಕ್ಕೆ ಸೀಮಿತವಾಗಿರದೆ ಸಾಮಾನ್ಯ ವಿಚಾರ, ಜ್ಞಾನವನ್ನು ಅರಿತುಕೊಳ್ಳಬೇಕು ಎಂದು ಬಿಎಲ್‌ಡಿಇ ಸಂಸ್ಥೆಯ ಉಪ ಹಣಕಾಸು ಅಧಿಕಾರಿ ಯಲ್ಲಾಲಿಂಗ ಯಾದವಾಡ ಹೇಳಿದರು.

ನಗರದ ಎ.ಎಸ್. ಪಾಟೀಲ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಐ.ಕ್ಯೂ.ಎ.ಸಿ ಸಹಯೋಗದಲ್ಲಿ ಪದವಿ ಪೂರ್ವ ಮತ್ತು ಪದವಿ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಂಡ ಅಂತರ ಕಾಲೇಜುಗಳ ರಸಪ್ರಶ್ನೆ ಕಾರ್ಯಕ್ರಮ 'ವಿದ್ಯಾವ್ಯೆಹ'ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ರಸಪ್ರಶ್ನೆ ಕಾರ್ಯಕ್ರಮದಲ್ಲಿ ಭಾಗವಹಿಸುವುದರ ಮೂಲಕ ಹೊಸ ವಿಚಾರಗಳನ್ನು ಅರಿಯಬಹುದು ವಿದ್ಯಾರ್ಥಿಗಳ ಮಧ್ಯೆ ಸ್ನೇಹ, ಬಾಂಧವ್ಯ, ಅಧ್ಯಯನ ಮಾಡುವ ಪ್ರವೃತ್ತಿ ಬೆಳೆಯುತ್ತದೆ ಎಂದರು.

ಪ್ರಾಚಾರ್ಯ ಡಾ. ಎಸ್.ಬಿ. ಕಮತಿ ಮಾತನಾಡಿ, ರಸಪ್ರಶ್ನೆಯಲ್ಲಿ ಭಾಗವಹಿಸಲು ವಿದ್ಯಾರ್ಥಿಗಳು ವಿವಿಧ ಮೂಲಗಳಿಂದ, ಪುಸ್ತಕಗಳಿಂದ ಮಾಹಿತಿಗಳನ್ನು ತಿಳಿಯುವ ಸಂಗ್ರಹಿಸುವ ಪ್ರವೃತ್ತಿ ಬೆಳೆಸಿ ಕೊಳ್ಳಬಹುದು. ರಸಪ್ರಶ್ನೆ ಕಾರ್ಯಕ್ರಮಗಳ ಮುಂದಿನ ಭವಿಷ್ಯದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಹಾಯ ಮಾಡುತ್ತವೆ. ಹೆಚ್ಚೆಚ್ಚು ವಿದ್ಯಾರ್ಥಿಗಳು ಭಾಗವಹಿಸಲಿ ಎಂದರು.

ವಿವಿಧ ಕಾಲೇಜುಗಳ ಸುಮಾರು 50 ತಂಡಗಳಿಂದ 100ಕ್ಕೂ ಹೆಚ್ಚು ವಿದ್ಯಾರ್ಥಿಗಳು ರಸಪ್ರಶ್ನೆಯಲ್ಲಿ ಭಾಗವಹಿಸಿದರು ಬಿ.ಎಲ್.ಡಿ.ಇ ಸಂಸ್ಥೆಯ ಬಿ.ಬಿ.ಎ ಕಾಲೇಜು ಪ್ರಥಮ ಸ್ಥಾನ, ವೇದಾಂತ ಕಾಲೇಜು ದ್ವಿತೀಯ ಸ್ಥಾನ, ಎ.ಎಸ್.ಪಿ. ಬಿ.ಸಿ.ಎ ವಿಭಾಗ ತೃತೀಯ ಸ್ಥಾನ ಪಡೆದವು. ರಸಪ್ರಶ್ನೆ ನಿರ್ವಾಹಕರಾದ ಅಂಕಿತಾ ಚವ್ಹಾಣ, ವರುಣಿ ಕುಲಕರ್ಣಿ ಸ್ಪರ್ಧೆಯನ್ನು ನಿರ್ವಹಿಸಿದರು, ಪ್ರಧಾನ ಕಾರ್ಯದರ್ಶಿ ಸಚಿನ ಮಗರಿ ಹಾಗೂ ರಸಪ್ರಶ್ನೆ ಸ್ಪರ್ಧೆಯ ಸಂಯೋಜಕಿ ಡಾ. ಭಾರತಿ ಮಠ ವೇದಿಕೆ ಮೇಲಿದ್ದರು.

ಕೃತಿ, ಆಧ್ಯ, ಅಂಕಿತಾ ಚವ್ಹಾಣ, ಬಿ.ಬಿ. ಮರಿಯಂ ಮುಲ್ಲಾ, ವೈಷ್ಣವಿ ಒಂಟಮೂರೆ, ವರುಣಿ ಕುಲಕರ್ಣಿ ಕಾರ್ಯಕ್ರಮ ನಿರ್ವಹಿಸಿದರು.

ಕುಸ್ತಿಯಲ್ಲಿ ಜಿಲ್ಲಾ ಸ್ಪರ್ಧೆಗೆ ಆಯ್ಕೆ

ಚಿಮ್ಮಡ: ಜಮಖಂಡಿಯಲ್ಲಿ ಸೆ. 25ರಂದು ನಡೆದ 2026–27ನೇ ಸಾಲಿನ ತಾಲೂಕು ಮಟ್ಟದ ಕ್ರೀಡಾಕೂಟದ ಕುಸ್ತಿ ಪಂದ್ಯಾವಳಿಯಲ್ಲಿ ಶ್ರೀ ಸಿದ್ದು ಸವದಿ ಶಿಕ್ಷಣ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಶ್ರೀ ಪ್ರಭುಲಿಂಗೇಶ್ವರ ಇಂಟರ್ ನ್ಯಾಷನಲ್ ಶಾಲೆಯ 7ನೇ ತರಗತಿ ವಿದ್ಯಾರ್ಥಿ ಆದರ್ಶಗೌಡ ಹಳೆಹಡಗಲಿ ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟದ ಕುಸ್ತಿ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.

ತಾಲೂಕು ಮಟ್ಟದ ಸ್ಪರ್ಧೆಯಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ ಆದರ್ಶಗೌಡ ಸಾಧನೆಗೆ ಶಾಲೆಯ ಆಡಳಿತ ಮಂಡಳಿ, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಹರ್ಷ ವ್ಯಕ್ತಪಡಿಸಿದ್ದಾರೆ.

ಸಂಸ್ಥೆಯ ಕಾರ್ಯದರ್ಶಿ ವಿದ್ಯಾಧರ ಸವದಿ, ಆಡಳಿತಾಧಿಕಾರಿ ಗಿರೀಶ ಕಂಬಿ, ಪ್ರಾಚಾರ್ಯ ಡಾ.ಬೇಬಿ ಸಾಸೀಜ್, ಕುಸ್ತಿ ತರಬೇತುದಾರರಾದ ಬಸು ಚಿಮ್ಮಡ, ವಿನೋದ ಬಳಗಾರ, ರಮೇಶ ಪಾಟೀಲ, ಶ್ರೀಶೈಲ ಚಿಕ್ಕಣ್ಣವರ ಹಾಗೂ ಶಿಕ್ಷಕ ವೃಂದ ಅಭಿನಂದಿಸಿದ್ದಾರೆ.

ಗುಮ್ಮಟನಗರಿಯಲ್ಲಿ ವಿಶ್ವ ಪ್ರವಾಸೋದ್ಯಮ ದಿನಾಚರಣೆ | ಶಾಸಕ ವಿಠ್ಠಲ ಕಟಕಧೋಂಡ ಹೇಳಿಕೆ

ಪ್ರವಾಸಿ ತಾಣಗಳ ಸರ್ವತೋಮುಖ ಅಭಿವೃದ್ಧಿಗೆ ಆದ್ಯತೆ

ಸಂ.ಕ. ಸಮಾಚಾರ, ವಿಜಯಪುರ

ನಗರದ ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆಯ ಜೊತೆಗೆ ಪ್ರವಾಸಿ ತಾಣಗಳ ಸರ್ವತೋಮುಖ ಅಭಿವೃದ್ಧಿಗೆ ಆದ್ಯತೆ ನೀಡಲಾಗುವುದು ಎಂದು ನಾಗಠಾಣ ಶಾಸಕ ವಿಠ್ಠಲ ಕಟಕಧೋಂಡ ಹೇಳಿದರು.

ಜಿಲ್ಲಾಡಳಿತ ಹಾಗೂ ಪ್ರವಾಸೋದ್ಯಮ ಇಲಾಖೆಯ ಸಹಯೋಗದಲ್ಲಿ ಇಬ್ರಾಹಿಂ ರೋಜಾ ಆವರಣದಲ್ಲಿ ಆಯೋಜಿಸಿದ್ದ ವಿಶ್ವ ಪ್ರವಾಸೋದ್ಯಮ ದಿನಾಚರಣೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ವಿಜಯಪುರವು ವಿಶ್ವವಿಖ್ಯಾತ ಗೋಳಗುಮ್ಮಟ ಸೇರಿದಂತೆ ಅಪರೂಪದ ಕಲೆ, ವಾಸ್ತುಶಿಲ್ಪ ಹಾಗೂ ಐತಿಹಾಸಿಕ ಸ್ಮಾರಕಗಳ ಶ್ರೀಮಂತ ಪರಂಪರೆಯನ್ನು ಹೊಂದಿದೆ. ಇಂತಹ ಅಮೂಲ್ಯ ಪರಂಪರೆಯ ಇತಿಹಾಸ ಹಾಗೂ ಮಹತ್ವವನ್ನು ವಿದ್ಯಾರ್ಥಿಗಳು ಮತ್ತು ಯುವಜನತೆಗೆ ಪರಿಚಯಿಸುವ ಮೂಲಕ ಸ್ಮಾರಕಗಳ ಸಂರಕ್ಷಣೆಯ ಕುರಿತು ಜಾಗೃತಿ ಮೂಡಿಸಬೇಕು. ಸ್ಮಾರಕಗಳ ಇತಿಹಾಸ ಮತ್ತು ಪ್ರವಾಸಿ ಮಾಹಿತಿಯನ್ನು ಸುಲಭವಾಗಿ ಒದಗಿಸುವ ಮೂಲಕ ದೇಶ–ವಿದೇಶಗಳ ಪ್ರವಾಸಿಗರನ್ನು ಆಕರ್ಷಿಸಬೇಕು ಎಂದರು.

ಪ್ರವಾಸೋದ್ಯಮದ ಬೆಳವಣಿಗೆಯಿಂದ ಸ್ಥಳೀಯ ವ್ಯಾಪಾರ, ಸಾರಿಗೆ, ಹೋಟೆಲ್, ಪ್ರವಾಸಿ ಮಾರ್ಗದರ್ಶಕರು ಹಾಗೂ ಸಣ್ಣ ಉದ್ಯಮಗಳಿಗೆ ಹೆಚ್ಚಿನ ಅವಕಾಶಗಳು ದೊರೆಯಲಿವೆ. ಇದರಿಂದ ಯುವಜನರಿಗೆ ಉದ್ಯೋಗ ಮತ್ತು ಸ್ವಉದ್ಯೋಗದ ಅವಕಾಶಗಳು ಹೆಚ್ಚುವುದರೊಂದಿಗೆ ಜಿಲ್ಲೆಯ ಆರ್ಥಿಕತೆಗೆ ಮತ್ತಷ್ಟು ಬಲ ದೊರೆಯಲಿದೆ ಎಂದರು.

ಭಾರತೀಯ ಪುರಾತತ್ವ ಇಲಾಖೆಯ ಸಹಾಯಕ ಸಂರಕ್ಷಣಾಧಿಕಾರಿ ವಿಜಯಕುಮಾರ ಮಾತನಾಡಿ, ಇಲ್ಲಿನ ಕಲೆ, ವಾಸ್ತುಶಿಲ್ಪ ಹಾಗೂ ಐತಿಹಾಸಿಕ ಪರಂಪರೆಯ ಕುರಿತು ಯುವಜನರು ಮತ್ತು ವಿದ್ಯಾರ್ಥಿಗಳು ಹೆಚ್ಚಿನ ಅರಿವು ಬೆಳೆಸಿಕೊಳ್ಳಬೇಕು. ಸ್ಮಾರಕಗಳ ಮಹತ್ವವನ್ನು ಅರಿತು ಅವುಗಳ ಸಂರಕ್ಷಣೆಗೆ ಸಹಕರಿಸಬೇಕು ಎಂದರು.

ವಿಜಯಪುರದಲ್ಲಿ ನಡೆದ ವಿಶ್ವ ಪ್ರವಾಸೋದ್ಯಮ ದಿನಾಚರಣೆಯಲ್ಲಿ ಶಾಸಕ ವಿಠ್ಠಲ ಕಟಕಧೋಂಡ ಮಾತನಾಡಿದರು.

ಉಪ ವಿಭಾಗಾಧಿಕಾರಿ ಜುಫಿಶಾನ್ ಹಕ್ ಮಾತನಾಡಿ, ವಿದ್ಯಾರ್ಥಿಗಳು ವಿನ್ಯಾಸಗೊಳಿಸಿರುವ ಪ್ರವಾಸೋದ್ಯಮ ಆ್ಯಪ್ ಬಿಡುಗಡೆಗೊಂಡಿದ್ದು, ಇದರಲ್ಲಿ ಜಿಲ್ಲೆಯ ಪ್ರವಾಸಿ ತಾಣಗಳು, ಹೋಟೇಲ್‌ಗಳು ಸೇರಿದಂತೆ ಪ್ರವಾಸಿಗರಿಗೆ ಅಗತ್ಯವಿರುವ ವಿವಿಧ ಮಾಹಿತಿಗಳನ್ನು ಒಳಗೊಂಡಿದೆ. ತಂತ್ರಜ್ಞಾನವನ್ನು ಬಳಸಿಕೊಂಡು ಪ್ರವಾಸಿಗರಿಗೆ ಅನುಕೂಲ ಕಲ್ಪಿಸುವ ಇಂತಹ ಪ್ರಯತ್ನಗಳು ಪ್ರವಾಸೋದ್ಯಮ ಅಭಿವೃದ್ಧಿಗೆ ಪೂರಕವಾಗಲಿವೆ ಎಂದರು.

ಪ್ರವಾಸಿಗರಲ್ಲಿ ಆಸಕ್ತಿ ಮೂಡಿಸಿ...

ಉಪನ್ಯಾಸ ನೀಡಿದ ಸುಮಂಗಲಾ ಬಿರಾದಾರ, ಡಿಜಿಟಲ್ ತಂತ್ರಜ್ಞಾನ ಹಾಗೂ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಬಳಸಿಕೊಂಡು ಪ್ರವಾಸಿಗರಲ್ಲಿ ಆಸಕ್ತಿ ಮೂಡಿಸುವ ಜೊತೆಗೆ ಹೆಚ್ಚಿನ ಪ್ರವಾಸಿಗರನ್ನು ಆಕರ್ಷಿಸಬಹುದಾಗಿದೆ. ವಿಜಯಪುರದ ಸ್ಮಾರಕಗಳ ವೈಶಿಷ್ಟ್ಯವನ್ನು ಡಿಜಿಟಲ್ ತಂತ್ರಜ್ಞಾನ ಹಾಗೂ ಎಐ ಮೂಲಕ ದೇಶ–ವಿದೇಶಗಳ ಪ್ರವಾಸಿಗರಿಗೆ ಪರಿಚಯಿಸುವ ಮೂಲಕ ಪ್ರವಾಸೋದ್ಯಮಕ್ಕೆ ಮತ್ತಷ್ಟು ಉತ್ತೇಜನ ನೀಡಬಹುದಾಗಿದೆ. ಪ್ರವಾಸಿಗರು ಯಾವುದೇ ತೊಂದರೆ ಇಲ್ಲದೆ ತಮಗೆ ಬೇಕಾದ ಮಾಹಿತಿ ಹಾಗೂ ಮಾರ್ಗದರ್ಶನವನ್ನು ತಂತ್ರಜ್ಞಾನದ ಸಹಾಯದಿಂದ ಪಡೆದುಕೊಳ್ಳುವಂತಾಗಬೇಕು. ಈ ನಿಟ್ಟಿನಲ್ಲಿ ಎಐ ಆಧಾರಿತ ಸೇವೆಗಳನ್ನು ಪ್ರವಾಸೋದ್ಯಮ ಕ್ಷೇತ್ರದಲ್ಲಿ ಅಳವಡಿಸಿಕೊಳ್ಳುವ ಅಗತ್ಯವಿದೆ ಎಂದರು.

ವಿಶ್ವ ಪ್ರವಾಸೋದ್ಯಮ ಆಚರಣೆ ಸಂದರ್ಭದಲ್ಲಿ ಜಿಲ್ಲೆಯ ಪ್ರವಾಸಿ ತಾಣಗಳು ಹಾಗೂ ಹೋಟೇಲ್ ವೀಕ್ಷಣಾ ಅವಧಿ ವಿವರ ವಿಜಯಪುರದ ವೈಭವದ ಇತಿಹಾಸ, ಸಂಸ್ಕೃತಿ ಮತ್ತು ವೈವಿಧ್ಯಮಯ ಅನುಭವಗಳನ್ನು ತಿಳಿಸಲು ಬಿಎಲ್‌ಡಿಇ ಡಾ. ಫ. ಗು. ಹಳಕಟ್ಟಿ ಇಂಜಿನೀಯರಿಂಗ್ ಹಾಗೂ ತಂತ್ರಜ್ಞಾನ ಕಾಲೇಜಿನ ವಿದ್ಯಾರ್ಥಿಗಳಾದ ದತ್ತಾ ಹಾಗೂ ತಂಡದ ಎಐ ತಂತ್ರಾಶ ಡಿಸ್ಕವರ್ ವಿಜಯಪುರ ಎಂಬ ನೂತನ ಆ್ಯಪ್‌ನ್ನು ಬಿಡುಗಡೆ ಮಾಡಲಾಯಿತು.

ಅತ್ಯುತ್ತಮ ಸೇವೆ ಸಲ್ಲಿಸಿದ ವಿಜಯಕುಮಾರ ಬಂಡಿ ಹಾಗೂ ಪ್ರವಾಸಿ ಮಿತ್ರರನ್ನು ಸನ್ಮಾನಿಸಲಾಯಿತು. ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ವಸಂತ ಹೊನಮೊಡೆ, ವಿಡಿಎ ಆಯುಕ್ತ ರಾಜಶೇಖರ ಡಂಬಳ, ಡಾ. ಮಲ್ಲನಗೌಡ ಬಿರಾದಾರ, ಚಂದ್ರಕಾಂತ ಶೆಟ್ಟಿ, ಆರತಿ ಪಾಟೀಲ, ಸಂಜು ಕಾಖಂಡಕಿ, ಗೌರಿಶಂಕರ, ಕಲ್ಲೂರ, ಸೋಮನಗೌಡ, ಮಂಜುನಾಥ ಪಿ., ಡಾ. ವೈ.ತಮ್ಮಣ್ಣ, ಪೀಟರ್ ಅಲೆಕ್ಸಾಂಡರ್, ಭೀಮರಾಯ ಜಿಗಜಿಣಗಿ, ಅಡಿವೆಪ್ಪ ಸಾಲಗಲ್, ಡಿ.ಪಿ. ಜಾಧವ, ಡಾ. ಅಮೀನ ಹುಲ್ಲೂರ, ಗಿರೀಶ ಹನಮರಡ್ಡಿ, ಜಗದೇವಿ ಕೆಂಬಾವಿ ಇದ್ದರು.

ಹಾವಿನಾಳ ದತ್ತಿ ಇಂಡಿಯಾ ಸಕ್ಕರೆ ಕಾರ್ಖಾನೆಯಲ್ಲಿ ಬಾಯ್ಲರ್ ಅಗ್ನಿ ಪ್ರದೀಪನ ಕಾರ್ಯಕ್ರಮ ನಡೆಯಿತು.

ಅ. 15ರೊಳಗೆ ಕಬ್ಬು ನುರಿಸುವಿಕೆ ಆರಂಭ

ಸಂ.ಕ. ಸಮಾಚಾರ ನಿವರಗಿ

ಸಮೀಪದ ಹಾವಿನಾಳ ಗ್ರಾಮದ ಶ್ರೀ ದತ್ತ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಸಕ್ಕರೆ ಕಾರ್ಖಾನೆಯ 2026–27ನೇ ಸಾಲಿನ ಬಾಯ್ಲರ್ ಅಗ್ನಿ ಪ್ರದೀಪನ ಕಾರ್ಯಕ್ರಮ ನಡೆಯಿತು.

ಉಪಾಧ್ಯಕ್ಷ ಮೃತ್ಯುಂಜಯ ಶಿಂದೆ ಮಾತನಾಡಿ, ಕಾರ್ಖಾನೆಯು ಐದನೇ ಬಾರಿಗೆ ಕಬ್ಬು ನುರಿಸುವಿಕೆ ಕಾರ್ಯ ಕೈಗೊಳ್ಳುತ್ತಿದ್ದು, ಅ. 15ರೊಳಗೆ ಆರಂಭಿಸಲಾಗುವುದು. ಪ್ರಸಕ್ತ ಸಾಲಿನಲ್ಲಿ ಏಳು ಲಕ್ಷ ಮೆಟ್ರಿಕ್ ಟನ್ ಕಬ್ಬು ನುರಿಸುವ ಗುರಿ ಹೊಂದಲಾಗಿದೆ. ಕಬ್ಬು ನೋಂದಣಿ, ಕಟಾವು ಹಾಗೂ ಸಾಗಾಣಿಕೆಗೆ ಅಗತ್ಯ ವ್ಯವಸ್ಥೆ ಮಾಡಲಾಗಿದ್ದು, ಯಂತ್ರೋಪಕರಣ ಗಳ ದುರಸ್ತಿ ಕಾರ್ಯ ಪೂರ್ಣಗೊಂಡಿದೆ ಎಂದು ಹೇಳಿದರು.

ರೈತರು ತಾವು ಬೆಳೆದ ಕಬ್ಬನ್ನು ಕಾರ್ಖಾನೆಗೆ ಕಳುಹಿಸಬೇಕು. ಬೆಳೆಗಾರರು ಹಾಗೂ ಕಟಾವು–ಸಾಗಾಣಿಕೆದಾರರ ಬಿಲ್‌ಗಳನ್ನು ನಿಗದಿತ ಸಮಯದಲ್ಲಿ ಬ್ಯಾಂಕ್ ಖಾತೆಗಳಿಗೆ ಜಮೆ ಮಾಡಲಾಗುವುದು. ರೈತರ ಹಿತಾಸಕ್ತಿಯೇ ಕಾರ್ಖಾನೆಯ ಉದ್ದೇಶವಾಗಿದ್ದು, ಗಾಳಿಮಾತುಗಳಿಗೆ ಕಿವಿಗೊಡದೆ ಸಹಕರಿಸುವಂತೆ ಶಿಂದೆ ಮನವಿ ಮಾಡಿದರು.

ಕಂಪನಿಯ ಸಂಚಾಲಕ ಚೇತನ ಧಾರು ಅವರ ಅಮೃತಹಸ್ತದಿಂದ ಕಾರ್ಯಕ್ರಮ ನೆರವೇರಿತು. ರಾಜ್ಯ ಶಿಖರ ಬ್ಯಾಂಕಿನ ಸಂಚಾಲಕ ಅವಿನಾಶ್ ಮಹಾಗವಕರ್, ಕಂಪನಿಯ ಉಪಾಧ್ಯಕ್ಷ ಮೃತ್ಯುಂಜಯ ಶಿಂದೆ ಸೇರಿದಂತೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು. ಕಾರ್ಖಾನೆಯ ಅಸಿಸ್ಟೆಂಟ್ ಇಂಜಿನಿಯರ್ ರೋಹಿತ್ ಪಾಟೀಲ್ ಹಾಗೂ ಅವರ ಪತ್ನಿ ಬಾಯ್ಲರ್ ಪೂಜೆ ನೆರವೇರಿಸಿದರು.

ಭರತ ತಾವರೆ, ರವೀಂದ್ರ ಗಾಯಕವಾಡ, ರವಿರಾಜ ಭೋಸಲೆ, ವೆಂಕಟೇಶ ರಾವ್, ಜಿತೇಂದ್ರ ಮೆಟಕರಿ, ಅನಿರುದ್ಧ ಪಾಟೀಲ, ವಿಜಯ ಹತ್ತೂರೆ, ರವೀಂದ್ರ ಬಿರಾಜದಾರ, ಸಂಗ್ರಾಮ್ ಸೂರ್ಯವಂಶಿ, ಪ್ರಮೊದ ಪಾಟೀಲ, ಸಚಿನ ನಿಕ್ಕಮ್ ಧನಂಜಯ ಪಾಟೀಲ, ವಿನಾಯಕ ಪೂಜಾರಿ, ಚಂದ್ರಕಾಂತ ಬಿರಾಜದಾರ, ಸಾವಕಾರ ಕೂಳಕರ ಹಾಗೂ ಅನೇಕರು ಇದ್ದರು.

ಕಡಿಮೆ ಪ್ರಮಾಣದ ಇನ್‌ಪುಟ್ ಸಬ್ಸಿಡಿ ಘೋಷಣೆ ವಿರುದ್ಧ ಗುಡುಗಿದ ರೈತರು

ಬರ ಪರಿಹಾರ ರೈತನ ಹಕ್ಕು ಅದು ಭಿಕ್ಷೆಯಲ್ಲ...

ಸಂ.ಕ. ಸಮಾಚಾರ, ವಿಜಯಪುರ

ಬರ ಪರಿಹಾರ ಎನ್ನುವುದು ರೈತನ ಹಕ್ಕು, ಆದರೆ ಸಂಕಷ್ಟದ ಸಮಯದಲ್ಲಿ ಕೇವಲ ಒಂದು ರೈತ ಕುಟುಂಬಕ್ಕೆ 2500 ರೂ. ಇನ್‌ಪುಟ್ ಸಬ್ಸಿಡಿ ಘೋಷಣೆ ಮಾಡಿರುವುದು ಯಾವ ನ್ಯಾಯ, ಪರಿಹಾರ ಎನ್ನುವುದು ಭೀಕ್ಷೆಯಲ್ಲ, ರೈತನ ಹಕ್ಕು ಎಂದು ಅಖಂಡ ಕರ್ನಾಟಕ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಅರವಿಂದ ಕುಲಕರ್ಣಿ ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗದಲ್ಲಿ ಸಂಘದ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಪ್ರತಿಭಟನೆ ನಡೆಸಿದ ವೇಳೆ ಆಕ್ರೋಶ ಹೊರಹಾಕಿದ ಅವರು, ಭೀಕರ ಬರಗಾಲ ಆವರಿಸಿ ರೈತರನ್ನು ಕಿತ್ತಿ ತಿನ್ನುತ್ತಿದೆ. ವಿವಿಧ ರೈತಪರ ಸಂಘಟನೆಗಳ ಹೋರಾಟದ ಪ್ರತಿಫಲವಾಗಿ ರಾಜ್ಯ ಸರ್ಕಾರ ಬರಗಾಲ ಘೋಷಣೆ ಮಾಡಿದೆ. ಆದರೆ ಪರಿಹಾರ ನೀಡಬೇಕೆಂದರೆ ರೈತರನ್ನು ಭಿಕ್ಷುಕರಂತೆ ಪರಿಗಣಿಸಿದೆ ಪ್ರತಿಯೊಬ್ಬ ರೈತನ ಒಂದು ಖಾತೆಗೆ 2500 ರೂಗಳಂತೆ ಪರಿಹಾರ ನೀಡಲು ರಾಜ್ಯ ಸರ್ಕಾರ ಮುಂದಾಗಿದೆ. ಆ ಮೂಲಕ ಈ ರಾಜ್ಯದ ರೈತರನ್ನು ಭಿಕ್ಷುಕರಂತೆ ನೋಡುತ್ತಿದೆ. ಈ ರಾಜ್ಯ ಸರ್ಕಾರದ ನೀತಿ ನೋಡಿದರೆ ಸರ್ಕಾರದಲ್ಲಿ ದುಡ್ಡಿಲ್ಲ ಆರ್ಥಿಕವಾಗಿ ಸಂಪೂರ್ಣ ಸರ್ಕಾರದ ಸ್ಥಿತಿ ಹದಗೆಟ್ಟಿದೆ ಎಂಬುದು ಸಾಬೀತಾಗಿದೆ ಎಂದರು.

ವಿಜಯಪುರದಲ್ಲಿ ಅಖಂಡ ಕರ್ನಾಟಕ ರೈತ ಸಂಘಟನೆಯ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು.

ಒಂದು ವೇಳೆ ಸರ್ಕಾರಕ್ಕೆ ಆರ್ಥಿಕವಾಗಿ ಮುಗ್ಗಟ್ಟಾಗಿದ್ದರೆ ನಾವು ರೈತರು ಕೈಲಾದ ಮಟ್ಟಿಗೆ ಆರ್ಥಿಕ ಸಹಾಯ ಮಾಡಲು ರೈತರಲ್ಲಿ ಭಿಕ್ಷೆ ಬೇಡಿಯಾದರೂ ಸರ್ಕಾರದ ಖಜಾನೆ ತುಂಬುತ್ತೇವೆ. ಒಂದು ವೇಳೆ ಸರ್ಕಾರಕ್ಕೆ ರೈತರಿಗೆ ಕನಿಷ್ಠ ಪ್ರತಿ ಎಕರೆಗೆ 25 ಸಾವಿರ ರೂ.ಗಳಂತೆ ಪರಿಹಾರ ಕೊಡಲು ಯೋಗ್ಯತೆ ಇಲ್ಲದಿದ್ದರೆ ಮುಖ್ಯಮಂತ್ರಿ ಆದಿಯಾಗಿ ಎಲ್ಲರೂ ರಾಜೀನಾಮೆ ಕೊಟ್ಟು ಮನೆಗೆ ತೆರಳಿ ಎಂದರು. ರೈತರ ಹಿತ ಕಾಪಾಡಲು ಆಗದ ಸರ್ಕಾರ ಇದ್ದರೇನು ಹೋದರೇನು ಇದ್ದರೂ ಕೂಡ ರೈತರ ಪಾಲಿಗೆ ಸರ್ಕಾರ ಸತ್ತಂತಿದೆ. ನಿಜವಾಗಿ ರೈತರ ಮೇಲೆ ಈ ಸರ್ಕಾರಕ್ಕೆ ಕಳಕಳಿ ಇದ್ದರೆ ಕನಿಷ್ಠ ಎಕರೆಗೆ 25 ಸಾವಿರ ರೂಗಳಂತೆ ಪರಿಹಾರ ನೀಡಬೇಕು. ಇಲ್ಲದಿದ್ದರ ಸರ್ಕಾರದ ವಿರುದ್ಧ ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಅರವಿಂದ ಕುಲಕರ್ಣಿ ಎಚ್ಚರಿಕೆ ನೀಡಿದ್ದಾರೆ.

ಸಂಘದ ಜಿಲ್ಲಾ ಸಂಚಾಲಕ ಪಾಂಡು ಹ್ಯಾಟಿ, ಗುರುರಾಜ ಪಡಶೆಟ್ಟಿ, ಗುರುಲಿಂಗಪ್ಪ ಪಡಸಲಗಿ, ಶ್ರೀಶೈಲ ಕುರಣದ, ಶಿವಪ್ಪ ಮಾಳಗೊಂಡ, ಅಶೋಕ ಉಪ್ಪಲದಿನ್ನಿ ಭಾಗವಹಿಸಿದ್ದರು.

ಶುದ್ಧ ಮನಸ್ಸಿನಿಂದ ದೇವರ ಸ್ಮರಣೆ ಮಾಡಿ

ಶಿರೂರ: ಪಟ್ಟಣದ ಹೊರವಲಯದಲ್ಲಿರುವ ಮುರ 'ನಾಳದ ಮಳಿರಾಜೇಂದ್ರ ಸ್ವಾಮೀಜಿ ಶಾಖಾಮಠದಲ್ಲಿ, ಮುರನಾಳದ ಜಗನ್ನಾಥ ಸ್ವಾಮೀಜಿ ನೇತೃತ್ವದಲ್ಲಿ 'ಶಿವಭಜನೆ ಸಪ್ತಾಹ' ಹಾಗೂ 'ವಿವಿಧ ಧಾರ್ಮಿಕ ಕಾರ್ಯಕ್ರಮ' ಜರುಗಿದವು. ಬೆಳಿಗ್ಗೆ ಮಳಿರಾಜೇಂದ್ರ ಸ್ವಾಮೀಜಿ ಮೂರ್ತಿಗೆ ವಿವಿಧ ಪೂಜಾ ಕೈಂಕರ್ಯ ನೆರವೇರಿದವು. ಬಳಿಕ ಕಮ್ಮಾರ ಓಣಿಯ ಮೂಲ ಅರ್ಚಕರ ಮನೆಯಿಂದ ಶ್ರೀಗಳ ಭಾವಚಿತ್ರ ಹಾಗೂ ನೈವೇದ್ಯವನ್ನು ಡೊಳ್ಳು ಮೇಳ, ಸುಮಂಗಲಿಯರ ಕಳಸಾರತಿ ಸಹಿತ ಮೆರವಣಿಗೆಯಲ್ಲಿ ಗೌಡರ ಮನೆಗೆ ಕೊಂಡೊಯ್ಯಲಾಯಿತು.

ಅಲ್ಲಿ ವಿಶೇಷ ಪೂಜೆ ಸಲ್ಲಿಸಿದ ನಂತರ ಮಠಕ್ಕೆ ಮರಳಿ ಪೂಜೆ ನೆರವೇರಿಸಲಾಯಿತು. ಜಗನ್ನಾಥ ಸ್ವಾಮೀಜಿ ಮಾತನಾಡಿ, ಪ್ರತಿಯೊಬ್ಬರೂ ಧಾರ್ಮಿಕ ಭಾವನೆಯಿಂದ, ಶುದ್ಧ ಮನಸ್ಸಿನಿಂದ ದೇವರ ನಾಮಸ್ಮರಣೆ ಮಾಡುವುದರಿಂದ ಮನಸ್ಸಿಗೆ ಶಾಂತಿ ಹಾಗೂ ನೆಮ್ಮದಿ ದೊರೆಯುತ್ತದೆ ಎಂದು ಹೇಳಿದರು.

ವಿಜಯಪುರದಲ್ಲಿ ಡಾ.ಭಾರತಿ ಅವರು ರಚಿಸಿದ ಅನುಭಾವದ ಪ್ರಸಾದ ಎಂಬ ಕೃತಿ ಲೋಕಾರ್ಪಣೆ ನಡೆಯಿತು.

ಆಧುನಿಕ ವಚನಗಳ ಪುಸ್ತಕ ಲೋಕಾರ್ಪಣೆ

ಸಂ.ಕ. ಸಮಾಚಾರ, ವಿಜಯಪುರ

ನಗರದ ನರಸಿಂಹ ದೇವಸ್ಥಾನದ ಸಭಾಭವನದಲ್ಲಿ ಹಮ್ಮಿಕೊಂಡ ಡಾ. ಭಾರತಿ ವಾಡಕರ ಅವರು ರಚಿಸಿದ ಅನುಭಾವದ ಪ್ರಸಾದ ಎಂಬ ಆಧುನಿಕ ವಚನಗಳ ಪುಸ್ತಕ ಲೋಕಾರ್ಪಣೆ ನಡೆಯಿತು.

ಗ್ರಂಥ ಲೋಕಾರ್ಪಣೆ ಸಮಾರಂಭ ಉದ್ಘಾಟಿಸಿದ ಉದ್ಯಮಿ ವಿಜಯ ಚವ್ಹಾಣ ಮಾತನಾಡಿ, ಆಧುನಿಕ ವಚನದ ಗ್ರಂಥವು ನಿಜಕ್ಕೂ ಅನುಭವದ ಪ್ರಸಾದವನ್ನು ಉಣಬಡಿಸಿದೆ. ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವ ವಿಚಾರಗಳನ್ನು ಈ ಗ್ರಂಥದಲ್ಲಿ ಬಿತ್ತರಿಸಿದ್ದಾರೆ, ಇದೊಂದು ಮೌಲ್ಯಾಧಾರಿತ ಗ್ರಂಥವಾಗಿದೆ ಎಂದರು.

ಕೃತಿಯನ್ನು ನಂದಾಬಾಯಿ ವಾಡಕರ ಅವರು ಬಿಡುಗಡೆಗೊಳಿಸಿದರು.

ಕೃತಿಯ ಕುರಿತು ಮಾತನಾಡಿದ ಸಾಹಿತಿ ಪ್ರೊ. ಎ.ಎಚ್. ಕೊಳಮಲಿ, ಅನುಭಾವದ ಪ್ರಸಾದ ಎಂಬ ಈ ಆಧುನಿಕ ವಚನ ಕೃತಿಯು ನಮಗೆ 12 ನೇ ಶತಮಾನದ ಶರಣರ, ದಾಸರ, ತತ್ವಪದಕಾರರ ಅನುಭವವನ್ನು ಮತ್ತೇ ಮರುಕಳಿಸಿದೆ.

ಮೋಸ, ವಂಚನೆ ಡಾಂಬಿಕತನವನ್ನು ಕಡೆಗಣಿಸಿದ ಈ ಕೃತಿಯು ಒಳ್ಳೆ ಸದ್ವಿಚಾರವನ್ನು ಒಳಗೊಂಡ ಮೌಲ್ಯಾದಾರಿತ ಗ್ರಂಥವಾಗಿದೆ. ಆಧುನಿಕ ವಚನಗಾರರ ಸಂಖ್ಯೆ ಹೆಚ್ಚಾಗಬೇಕಿದೆ ಎಂದರು.

ಲೇಖಕಿ ಡಾ. ಭಾರತಿ ವಾಡಕರ ಮಾತನಾಡಿ, ಬದುಕಿನ ಭಾವನೆಗಳನ್ನು ಈ ಕೃತಿಯಲ್ಲಿ ಬುತ್ತಿಯಾಗಿ ಕಟ್ಟಿ ಕೊಡುವ ಪ್ರಯತ್ನ ಮಾಡಿರುವೆ ಎಂದರು.

ಅಪ್ಪ ಸಾಹಿತ್ಯ ವೇದಿಕೆಯ ಅಧ್ಯಕ್ಷೆ ಸುಜ್ಞಾನಿ ಪಾಟೀಲ ಮಾತನಾಡಿ, ಮಹಿಳೆಯರು ಹೆಚ್ಚು ಹೆಚ್ಚು ಬರಹದಲ್ಲಿ ತೊಡಗಬೇಕು. ಶರಣೆಯರ ಪಾತ್ರವೂ ಕೂಡ ವಚನ ಸಾಹಿತ್ಯಕ್ಕೆ ಮುಖ್ಯವಾಗಿದೆ ಎಂದರು.

ಬಸವನ ಬಾಗೇವಾಡಿಯ ಚುಸಾಪ ಅಧ್ಯಕ್ಷ ಪ್ರಭಾಕರ ಖೇಡದ ಮಾತನಾಡಿದರು. ಹಿರಿಯ ಸಾಹಿತಿ ಮುರುಗೇಶ ಸಂಗಮ ಅಧ್ಯಕ್ಷತೆ ವಹಿಸಿದ್ದರು. ಎಲ್. ಎಚ್. ಕುಲಕರ್ಣಿ, ಅಂಬಣ್ಣ ಬಡಚಿ, ಪ್ರಾಚಾರ್ಯ ಧೋಂಡಿಬಾ ಘೋರ್ಪಡೆ, ಸುಭಾಸ ಚವ್ಹಾಣ ಕಾರ್ಯಕ್ರಮ ನಿರ್ವಹಿಸಿದರು.

SK CLASSIFIED

ಹುಬ್ಬಳ್ಳಿ ಆವೃತ್ತಿ ದರ			ವಿಜಯಪುರ & ಬಾಗಲಕೋಟ ಜಿಲ್ಲೆಗೆ ಮಾತ್ರ		
ಅಳತೆ	ದರ	ಕೊಡುಗೆ	ಅಳತೆ	ದರ	ಕೊಡುಗೆ
4x5	790/-	3+1 - 5+2	4x5	420/-	3+1 - 5+2
4x10	1260/-	3+1 - 5+2	4x10	840/-	3+1 - 5+2

ಲೈಂಗಿಕ ನಿಶ್ಯಕ್ತಿಗೆ ಸಂಪರ್ಕಿಸಿ
ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯ, ಶಾರೀರಿಕ ನಾಶ, ಶೀಘ್ರಸ್ಖಲನ, ಗಡುಸುತನ, ಲಿಂಗ ಚಿಕ್ಕದಿರುವದು, ಲಿಂಗ ದೌರ್ಬಲ್ಯ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ 36 ವರ್ಷ ಅನುಭವ. ಎಲ್ಲ ತರಹದ ಪುರುಷರ ಲೈಂಗಿಕ ಸಮಸ್ಯೆಗಳಿಗೆ ಸಮಕ್ಷಮ ಭೇಟಿಯಾಗಿರಿ
ಡಾ.ಕಟಾಪಿ. ನವಯೌವನ ಡಿಸ್ಪೆನ್ಸರಿ (Govt.Regd No.8043)
ಚನ್ನಮ್ಮ ಸರ್ಕಲ್, ದಾಜೀಬಾನ ಪೇಟ ರಸ್ತೆ, ಸಿಟಿ ಕ್ಲಿನಿಕ್ ದವಾಖಾನೆ ಎದುರಿಗೆ, ಹುಬ್ಬಳ್ಳಿ
M:9035252494

ಓದುಗರ ಗಮನಕ್ಕೆ
[illegible]
- [illegible]

NEFT (ನೆಫ್ಟ್) ಮೂಲಕ ಬ್ಯಾಂಕ್ ಖಾತೆಗೆ ಹಣ ಸಂದಾಯಿಸುವ ವಿವರ
1) A/c No. (ಖಾತೆ ಸಂ.) 0832000101347401
2) IFSC CODE (ಐಎಫ್‌ಎಸ್‌ಸಿ ಸಂಕೇತ): KARB 0000083
3) ಹಣ ಸಂದಾಯದ ಹೆಸರು: LOKA SHIKSHANA TRUST
4) ಬ್ಯಾಂಕ್ ಹೆಸರು : KARNATAKA BANK
BRANCH: KASTURBA ROAD, BANGALORE-560001.
5) ಪ್ಯಾನ್ ಸಂಖ್ಯೆ: AAATL 1086H
6) ವಿ.ಸೂ: ತಾವು ಜಮೆ ಮಾಡಿದ ಪೇ ಇನ್ ಸ್ಲಿಪ್ ಜೊತೆಗೆ ಪ್ರಕಟಿಸಬೇಕಾದ ಜಾಹೀರಾತನ್ನು ಸಂ.ಕ. ಕಚೇರಿಗೆ ಕಳುಹಿಸಬೇಕು.
* ಡಿ.ಡಿ. ಕಳಿಸುವುದಿದ್ದಲ್ಲಿ ಸಂಯುಕ್ತ ಕರ್ನಾಟಕ ಹೆಸರಿನಲ್ಲಿ ಕಳುಹಿಸಬೇಕು.

Edition	Bangalore	Gulburga	Davanagere	Mangalore	All Edition
*Disply Classified	Rs. 40-00	Rs.15-00	Rs. 15-00	Rs. 15-00	Rs.80-00

ಸಂಯುಕ್ತ ಕರ್ನಾಟಕ ಕ್ಲಾಸಿಫೈಡ್ಸ್
ಚಿಕ್ಕ ಜಾಹೀರಾತು..... ಅಗಾಧ ಫಲಿತಾಂಶ! ಜಾಹೀರಾತಿಗಾಗಿ ಸಂಪರ್ಕಿಸಿರಿ:
ಸಂಪರ್ಕಿಸಿರಿ: ಮೊ: 9900049656
ಇ-ಮೇಲ್: skhubli@gmail.com

ಸಿಂದಗಿ ವ್ಯಸನವು ಮಸಣಕ್ಕೆ ದಾರಿ

ಸಂ.ಕ.ಸಮಾಚಾರ ಸಿಂದಗಿ

ವ್ಯಸನವು ಮಸಣಕ್ಕೆ ದಾರಿ ತೋರಿಸುತ್ತದೆ. ಇಂದಿನ ಹೊಸ ಪೀಳಿಗೆಯನ್ನು ಮಾದಕ ವಸ್ತುಗಳ ದುಷ್ಪರಿಣಾಮಗಳ ಕುರಿತು ಜಾಗೃತಗೊಳಿಸುವ ಅಗತ್ಯವಿದೆ. ಈ ನಿಟ್ಟಿನಲ್ಲಿ ನಾವೆಲ್ಲರೂ ಒಗ್ಗೂಡಿ ಕಾರ್ಯನಿರ್ವಹಿಸಬೇಕು ಎಂದು ಸಿಂದಗಿ ಲಯನ್ಸ್ ಕ್ಲಬ್ ಕಾರ್ಯದರ್ಶಿ ಐ.ಬಿ. ಬಿರಾದಾರ ಹೇಳಿದರು.

ಸಿಂದಗಿ ಲಯನ್ಸ್ ಕ್ಲಬ್, ಸಿ.ಎಂ. ಮನಗೂಳಿ ಪದವಿ ಮಹಾವಿದ್ಯಾಲಯದ ರೆಡ್ ಕ್ರಾಸ್ ಘಟಕ ಹಾಗೂ ಜೆ.ಎಚ್. ಪಟೇಲ ಶಿಕ್ಷಣ ಮಹಾವಿದ್ಯಾಲಯದ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ 'ನಶೆ ಮುಕ್ತ ಭಾರತ ಅಭಿಯಾನ'ದ ಜಾಗೃತಿ ಜಾಥಾಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಮಾದಕ ವಸ್ತುಗಳ ವ್ಯಸನದಿಂದ ವ್ಯಕ್ತಿಯ ಆರೋಗ್ಯ, ಕುಟುಂಬ ಹಾಗೂ ಸಮಾಜದ ಮೇಲೆ ಗಂಭೀರ ಪರಿಣಾಮ ಉಂಟಾಗುತ್ತದೆ. ಯುವಜನತೆ ವ್ಯಸನಕ್ಕೆ ಒಳಗಾಗದಂತೆ ಜಾಗೃತಿ ಮೂಡಿಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಲಯನ್ಸ್ ಕ್ಲಬ್ ಅಧ್ಯಕ್ಷ ಡಾ. ಅಂಬರೀಶ ಬಿರಾದಾರ, ಎಂ.ಜೆ.ಎಫ್. ಲಯನ್ ಕೆ.ಎಚ್. ಸೋಮಪುರ, ಜೆ.ಎಚ್. ಪಟೇಲ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಬಿ.ಎಂ. ಹುರುಕಡ್ಲಿ, ಸಿ.ಎಂ. ಮನಗೂಳಿ ಪದವಿ ಮಹಾವಿದ್ಯಾಲಯದ ಪ್ರಾಚಾರ್ಯ ಬಿ.ಡಿ. ಮಾಸ್ತಿ, ಡಾ. ಎಸ್.ಕೆ. ಹೂಗಾರ, ಪ್ರೊ. ಎಂ.ಎಲ್. ಪರಮಾನಂದ, ಗುರುಲಿಂಗಪ್ಪ ಬಿರಾದಾರ, ಆರ್.ಎಂ. ಯಂಕಂಚಿಕರ, ಎಸ್.ವೈ. ನಾಯ್ಕೋಡಿ, ಲಯನ್ ಶಾಂತು ದುರ್ಗಿ, ಲಯನ್ ಶರಣು ಬೂದಿಹಾಳ ಸೇರಿದಂತೆ ಉಪನ್ಯಾಸಕರು, ವಿದ್ಯಾರ್ಥಿಗಳು ಹಾಗೂ ಪ್ರಶಿಕ್ಷಣಾರ್ಥಿಗಳು ಇದ್ದರು.

ಜಾಗೃತಿ ಜಾಥಾದಲ್ಲಿ ಸಿ.ಎಂ. ಮನಗೂಳಿ ಮಹಾವಿದ್ಯಾಲಯದ ಎನ್‌ಸಿಸಿ ವಿದ್ಯಾರ್ಥಿಗಳು ಹಾಗೂ ಜೆ.ಎಚ್.ಪಟೇಲ್ ಮಹಾವಿದ್ಯಾಲಯದ ಪ್ರಶಿಕ್ಷಣಾರ್ಥಿಗಳು ವಿವಿಧ ಘೋಷಣೆಗಳನ್ನು ಕೂಗುತ್ತಾ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿ ಜಾಗೃತಿ ಮೂಡಿಸಿದರು.

बैंक ऑफ़ बड़ौदा Bank of Baroda
ಬ್ಯಾಂಕ್ ಆಫ್ ಬರೋಡ
ಸಿಂಧಗಿ ಶಾಖೆ,
ವಿಜಯಪುರ
ಇ–ಹರಾಜು ಮಾರಾಟ ಸೂಚನೆ

2002 ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 6(2) ಮತ್ತು 8(6) ರ ಪ್ರಾವಿಸೋಗಳೊಂದಿಗೆ ಓದಿಕೊಳ್ಳಬೇಕಾದ 2002 ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಹಿತಾಸಕ್ತಿ ಜಾರಿ ಕಾಯಿದೆಯಡಿ ಇ–ಹರಾಜು.
ಸಾರ್ವಜನಿಕರಿಗೆ ವಿಸ್ತಾರವಾಗಿ, ಸಾಲಗಾರನಿ(ರಿ)ಗೆ/ ಅಡಮಾನದಾರನಿ(ರಿ)ಗೆ ಹಾಗೂ ಜಾಮೀನುದಾರನಿ(ರಿ)ಗೆ ನಿರ್ದಿಷ್ಟವಾಗಿ ಸೂಚನೆ ನೀಡುವುದೇನೆಂದರೆ, ಕೆಳಕಂಡ ಸ್ಥಿರ ಆಸ್ತಿಗಳು ಭದ್ರತಾ ಸಾಲಿಗರಿಗೆ (ಸೆಕ್ಯೂರ್ಡ್ ಕ್ರೆಡಿಟರ್) ರಿಗೆ ಅಡಮಾನವಾಗಿದ್ದು/ಅವರ ಛಾರ್ಜಿನಲ್ಲಿದ್ದು, ಇದರ ಸ್ವಾಧೀನತೆಯನ್ನು ಸೆಕ್ಯೂರ್ಡ್ ಕ್ರೆಡಿಟರ್ ರವರಾದ, ಬ್ಯಾಂಕ್ ಆಫ್ ಬರೋಡಾದ ಅಧಿಕೃತ ಅಧಿಕಾರಿಗಳು ಪಡೆದುಕೊಂಡಿದ್ದು, ಇವುಗಳನ್ನು ಕೆಳಕಂಡ ಖಾತೆಯ(ಗಳ) ಬಾಕಿ ವಸೂಲಾತಿಗಾಗಿ ಎಲ್ಲಿ ಹೇಗಿದೆಯೋ ಹಾಗೆಯೇ, ಎಲ್ಲಿ ಏನಿದೆಯೋ ಹಾಗೆಯೇ ಮತ್ತು ಏನು ಉಳಿದಿದೆಯೋ" ಅವುಗಳನ್ನು ಆಧಾರದ ಮೇಲೆ ಮಾರಾಟ ಮಾಡಲಾಗುತ್ತದೆ. ಸಾಲಗಾರನ(ರ)/ಅಡಮಾನದಾರನ(ರ)/ಜಾಮೀನುದಾರನ(ರ) ಭದ್ರತಾ ಆಸ್ತಿ(ಗಳು)/ಬಾಕಿ/ ಮೀಸಲು ಬೆಲೆ / ಇ–ಹರಾಜು ದಿನಾಂಕ ಮತ್ತು ಸಮಯ, ಇಎಂಡಿ ಮತ್ತು ಬಿಡ್ ಹೆಚ್ಚಿಸಬಹುದಾದ ಮೊತ್ತ ವಿವರಗಳು ಕೆಳಕಂಡಂತಿವೆ :–

ಕ್ರ ಸಂ	ಸಾಲಗಾರರ ಮತ್ತು ಅಡಮಾನವಾಗಿರಿಸಿದ ಆಸ್ತಿಯ ಮಾಲಕರು ಹೆಸರು ಮತ್ತು ವಿಳಾಸ	ಆಸ್ತಿಯ ವಿವರ:	ಒಟ್ಟು ಬಾಕಿ	ಇ-ಹರಾಜಿ ದಿನಾಂಕ ಮತ್ತು ಸಮಯ:	ಆಸ್ತಿಯ ಮೀಸಲು ಬೆಲೆ ಇಎಂಡಿ ಕನಿಷ್ಠ ಬಿಡ್ಡಿನ ಹೆಚ್ಚುವರಿ ಮೊತ್ತ (ರೂ)	ಆಸ್ತಿಯ ಸ್ವರೂಪ (ರಚನಾತ್ಮಕ/ ಭೌತಿಕ)	ಆಸ್ತಿ ಪರಿಶಿಲನೆ ದಿನಾಂಕ ಮತ್ತು ಸಮಯ
1	ನ್ಯೂ ಆರ್ ಕೆ ಟ್ರೆಡರ್ಸ್ ಪ್ರೋ: ಶ್ರೀ. ಕಾಸಿಂ ಅಬ್ಬಾಸ್ ಮೊಮಿನ್ ತಂದೆ ಅಬ್ಬಾಸ್ ಮೊಮಿನ್, ವಾರ್ಡ್ ನಂ 23, ಭವಾನಿ ಕಾಂಪ್ಲೆಕ್ಸ್, ವಿಜಯಪುರ ರಸ್ತೆ, ಸಿಂಧಗಿಂ, ವಿಜಯಪುರ ಜಿಲ್ಲೆ	ಸ್ವತ್ತು 1:–ಸಂದರ್ಭಿತ ಸ್ವತ್ತು ನಂ. 811/, 1A/16, ವಿಸ್ತೀರ್ಣ 9*12=108 ಚ.ಮೀ., ಸಿಂಧಗಿ ತಾಲೂಕಿನಲ್ಲಿರುವ, ಕಾಸಿಂ ಅಬ್ಬಾಸ್ ಮೊಮಿನ್ ತಂದೆ ಅಬ್ಬಾಸ್ ಮೊಮಿನ್ ಇವರ ಹೆಸರಿನಲ್ಲಿದೆ. ಇದರ ಚಕಬಂದಿ:ಪೂರ್ವಕ್ಕೆ: ಪ್ಲಾಟ್ ನಂ 15, ಪಶ್ಚಿಮಕ್ಕೆ: 9ಮೀ ರಸ್ತೆ, ಉತ್ತರಕ್ಕೆ: 9 ಮೀ ರಸ್ತೆ, ದಕ್ಷಿಣಕ್ಕೆ: ಪ್ಲಾಟ್ ನಂ 17. ಸ್ವತ್ತು 2:–ಸಂದರ್ಭಿತ ಸ್ವತ್ತು ನಂ. 150/B/65, ವಿಸ್ತೀರ್ಣ 15*8.5=127.50 ಚಚ.ಮೀ., ಸಿಂಧಗಿ ತಾಲೂಕಿನಲ್ಲಿರುವ, ಕಾಸಿಂ ಅಬ್ಬಾಸ್ ಮೊಮಿನ್ ತಂದೆ ಅಬ್ಬಾಸ್ ಮೊಮಿನ್ ಇವರ ಹೆಸರಿನಲ್ಲಿದೆ.ಇದರ ಚಕಬಂದಿ:ಪೂರ್ವಕ್ಕೆ: ಪ್ಲಾಟ್ ನಂ 66, ಪಶ್ಚಿಮಕ್ಕೆ: ಆರ್ ಎಸ್ ನಂ 145, ಉತ್ತರಕ್ಕೆ: ಪ್ಲಾಟ್ ನಂ 64, ದಕ್ಷಿಣಕ್ಕೆ: 3ಮೀ ರಸ್ತೆ,	ರೂ. 17,69,236/- + ಮೊತ್ತದ ಮೇಲಿನ ಬಡ್ಡಿ ಮತ್ತು ಇತರೆ ಖರ್ಚು ವೆಚ್ಚಗಳು	02.11.2026 .14.00 ರಿಂದ 18.00 ಗಂಟೆಯವರೆಗೆ	ಸ್ವತ್ತು 1 1)ಮೀಸಲು ಬೆಲೆರೂ.6,62,150/- 2)ಇಎಂಡಿ:ರೂ.66,215/- 3)ಕನಿಷ್ಠ ಬಿಡ್ಡಿನ ಹೆಚ್ಚುವರಿ ಮೊತ್ತ ರೂ.10,000 /- ಸ್ವತ್ತು 2 1)ಮೀಸಲು ಬೆಲೆರೂ.3,51,500/- 2)ಇಎಂಡಿ:ರೂ.35,150/- 3)ಕನಿಷ್ಠ ಬಿಡ್ಡಿನ ಹೆಚ್ಚುವರಿ ಮೊತ್ತ ರೂ.10,000 /-	ಸಾಂಕೇತಿಕ	31.10.2026 ರವರೆಗೆ ಸಂಜೆ 4.00 ಗಂಟೆಯವರೆಗೆ (ಕೆಲಸದ ದಿನಗಳೊಳಗೆ/ ಸಮಯದೊಳಗೆ ಮಾತ್ರ)

ಮಾರಾಟದ ವಿವರವಾದ ಷರತ್ತು ನಿಬಂಧನೆಗಳಿಗಾಗಿhttps://baankent.com ಹಾಗೂ https://www.bankofbaroda.in/e-auction.htm ನಲ್ಲಿನ ಲಿಂಕ್ ಅನ್ನು ನೋಡಿ ಅಲ್ಲದೇ ನಿರೀಕ್ಷಿತ ಬಿಡ್‌ದಾರರು ಅಧಿಕೃತ ಅಧಿಕಾರಿ ಮೊಬೈಲ್ ಸಂಖ್ಯೆ6366533597ಗೂ ಸಹ ಕರೆ ಮಾಡಬಹುದು.
ದಿನಾಂಕ:28.09.2026, ಸ್ಥಳ:ಸಿಂಧಗಿ
ಸಹಿ/– ಅಧಿಕೃತ ಅಧಿಕಾರಿ, ಬ್ಯಾಂಕ್ ಆಫ್ ಬರೋಡ

ಮಾಣಿಕ್ಯವಳ್ಳಿ ಸಾಹಿತ್ಯ ಬಳಗ ಉದ್ಘಾಟನೆ, ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮದಲ್ಲಿ ಪ್ರದಾನ

ಬಸವಜನ್ಮಸ್ಥಳ ಕ್ಷೇತ್ರ ಚರಿತ್ರೆ ಪುಸ್ತಕಕ್ಕೆ ಪ್ರಶಸ್ತಿ

ಸಂ.ಕ. ಸಮಾಚಾರ, ಮನಗೂಳಿ

ಸಾಹಿತಿ ಮುರುಗೇಶ ಸಂಗಮ ಅವರ ಸಂಶೋಧನಾ ಸ್ವರೂಪದ ಬಸವ ಜನ್ಮಸ್ಥಳ ಬಸವನಬಾಗೇವಾಡಿ ಕ್ಷೇತ್ರ ಚರಿತ್ರೆ ಕೃತಿಗೆ ಮನಗೂಳಿಯ ಮಾಣಿಕ್ಯವಳ್ಳಿ ಸಾಹಿತ್ಯ ಬಳಗ ಪುಸ್ತಕ ಪ್ರಶಸ್ತಿ ನೀಡಿರುವುದು ಸಂತಸದ ಸಂಗತಿ ಎಂದು ಹಿರಿಯ ಸಾಹಿತಿ ಸಿದ್ಧಲಿಂಗ ಮನಹಳ್ಳಿ ಹೇಳಿದರು.

ಪಟ್ಟಣದ ಸೋಮೇಶ್ವರ ದೇವಸ್ಥಾನದ ಸಭಾಂಗಣದಲ್ಲಿ ಮಾಣಿಕ್ಯವಳ್ಳಿ ಸಾಹಿತ್ಯ ಬಳಗ ಆಯೋಜಿಸಿದ್ದ ಬಳಗದ ಉದ್ಘಾಟನೆ, ಪದಾಧಿಕಾರಿಗಳ ಪದಗ್ರಹಣ, ಪುಸ್ತಕ ಪ್ರಶಸ್ತಿ ಪ್ರದಾನ, ಕವಿಗೋಷ್ಠಿ ಹಾಗೂ ಸನ್ಮಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಬಸವಣ್ಣನ ಜೀವನ ಚರಿತ್ರೆಯನ್ನು ಪರಿಚಯಿಸಿದ ಈ ಕೃತಿ ಅಮೂಲ್ಯವಾದುದು. ವಚನ ಸಾಹಿತ್ಯದ ಮೂಲಕ ಜಾತಿ ಲಿಂಗ ಮತ್ತು ವರ್ಗ ಭೇದವಿಲ್ಲದೆ ಸರ್ವರೂ ಸಮಾನರು ಎಂದು ಸಾರಿ ಜಗತ್ತಿನ ಮೊದಲ ಸಂಸತ್ ಮಾದರಿಯ ಅನುಭವ ಮಂಟಪ ಸ್ಥಾಪಿಸಿದ ಜಗಜ್ಯೋತಿಯ ಜೀವನ ಚರಿತ್ರೆ ಮೇಲೆ ಹೊಸ ಬೆಳಕು ಚೆಲ್ಲಿದ ಈ ಕೃತಿ ಶ್ರೇಷ್ಠವಾಗಿದೆ ಎಂದರು.

ಜಿಲ್ಲಾ ಸಹಕಾರಿ ಯುನಿಯನ್ ನಿರ್ದೇಶಕ ವಿಶ್ವನಾಥಗೌಡ ಪಾಟೀಲ ಮಾತನಾಡಿ, ಗ್ರಾಮೀಣ ಪ್ರದೇಶಗಳಲ್ಲಿ ಆಗಾಗ ಸಾಹಿತ್ಯಿಕ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗುತ್ತಿರಬೇಕು ಎಂದರು.

ನಂದಿ ಶುಗರ್ ಸಹಕಾರಿ ಸಕ್ಕರೆ ಕಾರ್ಖಾನೆಯ ಮಾಜಿ ನಿರ್ದೇಶಕ ರೇವಣಸಿದ್ಧ ಮಣೂರ ಮಾತನಾಡಿ, ಹಳ್ಳಿಗಳಲ್ಲಿ ಉದಯಿಸುತ್ತಿರುವ ಸಾಹಿತ್ಯ ವೇದಿಕೆಗಳಿಂದ ಗ್ರಾಮೀಣ ಪ್ರತಿಭೆಗಳು ಅನಾವರಣಗೊಳ್ಳುತ್ತವೆ. ಇಂಥ ಬಳಗಗಳು ಬೌದ್ಧಿಕ ಪ್ರಗತಿಯ ಸಂಕೇತಗಳಾಗಿವೆ ಎಂದರು.

ಮನಗೂಳಿಯಲ್ಲಿ ಮಾಣಿಕ್ಯವಳ್ಳಿ ಸಾಹಿತ್ಯ ಬಳಗ ಉದ್ಘಾಟನೆ, ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮದಲ್ಲಿ ಸಾಹಿತಿ ಮುರುಗೇಶ ಸಂಗಮ ಅವರನ್ನು ಸನ್ಮಾನಿಸಲಾಯಿತು.

ಸಾಹಿತಿ ಮುರುಗೇಶ ಸಂಗಮ ಅವರ ಬಸವ ಜನ್ಮಸ್ಥಳ ಬಸವನಬಾಗೇವಾಡಿ ಕ್ಷೇತ್ರ ಚರಿತ್ರೆ ಕೃತಿಗೆ 5 ಸಾವಿರ ನಗದು ಸ್ಮರಣಿಕೆಯೊಂದಿಗೆ ಹಾಗೂ ಪುಸ್ತಕ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಶಿವಾಜಿ ಮೋರೆ, ಗಿರಿಜಾ ಮುದ್ದಾಪುರ, ಸಂಗಮೇಶ ಸಾತಲಗಾಂವಿ, ರವಿ ಆಶ್ರಿತ, ಸಗಮೇಶ ಪೂಜಾರಿ, ಅಶೋಕ ಎಲೇರಿ, ಸಂಗಮೇಶ ಚಿಮ್ಮಲಗಿ, ಶ್ರವಣ ಕೋಟ್ಯಾಳ, ಶಿವಯ್ಯ ಮಠಪತಿ, ಸಂತೋಷ ನಾಮನೆ, ಸಂಗಮೇಶ ಗೆಣ್ಣೂರ, ಪ್ರಶಾಂತ ಖವಾಸಪೂರ ಹಾಗೂ ಗೌರವ ಸಲಹೆಗಾರರಾಗಿ ವಿಠ್ಠಲ ಶಿಂಧೆ, ಪರಪ್ಪ ಬನ್ನಟ್ಟಿ, ವಿನೋದ ಕುಲಕರ್ಣಿ, ಸಿದ್ರಾಮ ಬಿರಾದಾರ ಅಧಿಕಾರ ಸ್ವೀಕರಿಸಿದರು.

ಕವಿಗೋಷ್ಠಿಯಲ್ಲಿ ಪೂರ್ಣಿಮಾ ಶಂಕರ, ಸಹದೇವ ಗುಡದಿನ್ನಿ, ಅನುಪ್ರಿಯಾ ಬಿರಾದಾರ, ತಾರಾಮತಿ ಪಾಟೀಲ, ಈರಮ್ಮ ಬೋನೂರ, ತೇಜಶ್ವಿನಿ ನಾಡಗೌಡ, ಶಿಲ್ಪಾ ಅಂಕೋಶಕರ, ಯಮನೂರಪ್ಪ ಅರಬಿ, ಅಮೀನಾ ಹತ್ತರಕಿಹಾಳ, ಬಸಮ್ಮ ಮದರಿಮಠ, ಕಲಾವತಿ ಬಗಲಿ, ಭಾಗ್ಯಶ್ರೀ ಮಠ, ಗಂಗಾಬಾಯಿ ಮಾಚಕನೂರ, ಸ್ವಪ್ನಾ ಎಂ. ಎನ್., ಶಾರದಾ ತೋಟದ, ದಾನೇಶ್ವರಿ ಆಲಾಳೆ, ವಾಣಿ ನಾಗರಾಳ, ದಾಕ್ಷಾಯಣಿ ಬಾಗೇವಾಡಿ, ಸಹನಾ ಮಬ್ರೂಕರ, ಅಂಬಣ್ಣ ಬಡಚಿ, ಮಲ್ಲು ಹಡಪದ, ನೀಲಮ್ಮ ಮಠ, ವನಜಾಕ್ಷಿ ಬಡಿಗೇರ, ಗಿರಿಜಾ ಮುದ್ದಾಪುರ ಹಾಗೂ ಸಿದ್ದಪ್ಪ ಹದಿಮೂರ ತಮ್ಮ ಸ್ವರಚಿತ ಕವನ ವಾಚಿಸಿದರು.

ಪತ್ರಕರ್ತ ಮಹೇಶ ಪಿರಗಾ, ಅಶೋಕ ಎಲೇರಿ, ಸಂಗಮೇಶ ಪೂಜಾರಿ, ಎಚ್.ಬಿ. ರಾಜ್, ಹಾಗೂ ಶರಣು ಕಾಟಕರ, ಬನದೇಶ ಎಲೇರಿ ಅವರನ್ನು ಸನ್ಮಾನಿಸಲಾಯಿತು.